

ಈಸಿಚೇರಿನಲ್ಲಿ ಕೂತಿದ್ದ ದತ್ತು ಮೇಷ್ಟ್ರಿಗೆ ಇನ್ನೂ ನಡೆದುದನ್ನು ಅರಗಿಸಿಕೊಳ್ಳಲು ಆಗುತ್ತಲೇ ಇಲ್ಲ. ಬೀಡಿ ಮೇಲೆ ಬೀಡಿ ಸುಟ್ಟರೂ ಸಮಾಧಾನವಾಗದೇ ಕೊನೆಗೆ ತುಟಿಗಳು ಒಣಗಿದಂತಾದಾಗ ದಾರಿ ಕಾಣದೇ ವೀಳ್ಯದೆಲೆ ರಸವನ್ನು ತೋಳ ಮೇಲೆ ಒರೆಸಿಕೊಳ್ಳತೊಡಗಿದರು. ಬಾಯಿಗಿಟ್ಟ ಅಡಿಕೆಯೊಂದಿಗೆ ಜಗಿದಷ್ಟೂ ಅವಮಾನದ ಭಾರ ಏರತೊಡಗಿತು. ದೊಡ್ಡ ಮಗನ ಹೆಂಡತಿ, 'ಮಾವ, ಊಟಕ್ಕೆ ಬನ್ನಿ...' ಎಂದು ಹೇಳಿದ್ದು ಕೇಳಿದರೂ ಕೇಳದಂತೆ ಇನ್ನೂ ಬಲವಾಗಿ ಅಡಿಕೆ ಜಗಿಯತೊಡಗಿದರು. 'ಅದಕ್ಕೆ... ಅದಕ್ಕೇ... ನಮ್ಮ ಹಿರಿಯರು ಹೇಳ್ತಾ ಇದ್ದದು... ಮೀನಿನ ನಡೆಯನ್ನಾದರೂ ಗುರುತಿಸಬಹುದಂತೆ, ಹೆಂಗಸಿನ ಮನದಲ್ಲಿ ಏನಿದೆ ಅಂತ ತಿಳಿಯದು ಅಂತ. ಸಾಧಿಸಿ ತೋರಿಸಿದಳಲ್ವ ಇವಳು! ಹೋಗ್ತಾ ನಮಸ್ಕಾರ ಬೇರೆ ಇವಳದ್ದು. ಅಲ್ಲೇ ಒದೀಬೇಕಿತ್ತು ಇವಳ ಎದೆಗೆ. ಹ್ಮ... ಒದೀತಾನೂ ಇದ್ದೆ ಮಗ ಇಲ್ಲದಿದ್ರೆ... ಸಾಯಲಿ... ಸತ್ತು ಹೋದ್ಲು ಅಂದ್ಕೊಳೋದು. ಸತ್ತು ಹೋಗ್ತಿದ್ರೂ ಇಷ್ಟು ಬೇಜಾರಾಗ್ತಿರಲಿಲ್ಲ... ಮೂರುಕಾಸಿನ ಹೆಂಗಸು ಹೇಗೆ ಎದ್ದು ಹೋದಳು. ಹೋಗಲಿ. ನಾಲ್ಕು ದಿನದಲ್ಲಿ ಸೊಸೆಯ ಹತ್ರ ಅನಿಸಿಕೊಂಡಾಗ ಬಾಲ ಮಡಚಿಕೊಂಡು ಇಲ್ಲೆ ಬರ್ತಾಳೆ. ಆಗ ನೋಡ್ತಿನಿ ಇವಳ ಅಹಂಕಾರ ಎಲ್ಲಿ ಹೋಯ್ತು ಅಂತ.' ಧುಮುಧುಮುಗುಟ್ಟುತ್ತಾ ಇದ್ದ ಮೇಷ್ಟ್ರಿಗೆ, ಹೊಟ್ಟೆಯಲ್ಲಿದ್ದುದು ಎಲ್ಲಾ ಭಸ್ಮವಾದಂತೆ ಬ್ರಹ್ಮಾಂಡ ಹಸಿವಾಗತೊಡಗಿತು. ಸೀದಾ ಹೋಗಿ ತಟ್ಟೆ ಮುಂದೆ ಕುಳಿತರೆ ತಟ್ಟೆಯೊಳಗೇ ಉಪ್ಪು, ಉಪ್ಪಿನಕಾಯಿ, ಪಲ್ಯ ಬಡಿಸಿದ್ದುದನ್ನು ನೋಡಿ ಸಿಟ್ಟು ಏರಿತು. 'ನಿಂಗೊತ್ತಲ್ವ ನಂಗೆ ಪಲ್ಯ, ಉಪ್ಪಿನಕಾಯಿ ಎಲ್ಲ ಬೇರೆ ಸಣ್ಣ ಕಪ್ಪಿನಲ್ಲಿ ಇರಬೇಕು ಅನ್ನೋದು' ದನಿ ಎತ್ತರಿಸಿ ಅಂದಾಗ ದೊಡ್ಡ ಮಗ, 'ಅಪ್ಪಾ ಕೆಲಸದವಳು ನಾಳೆಯಿಂದ ಮೂರು ದಿನ ಇಲ್ವಂತೆ. ಹೀಗೆ ಸಣ್ಣ ಸಣ್ಣ ಪಾತ್ರೆಗಳೇ ರಾಶಿ ಬಿದ್ರೆ ತೊಳೆಯುವವರು ಯಾರಪ್ಪಾ, ಸ್ವಲ್ಪ ಹೊಂದ್ಕೊ' ಎಂದಾಗ ತಟ್ಟೆ ತಳ್ಳಿ ಏಳಬೇಕೆಂದು ಎನಿಸಿದರೂ ಹಸಿವಿನ ಸಂಕಟ ಜೋರಾಗಿದ್ದಕ್ಕೆ ಅನ್ನ ಕಲೆಸತೊಡಗಿದರು. ಬಾಯಿಗಿಟ್ಟಾಗ ಸಂಕಟಕ್ಕೋ ಅವಮಾನಕ್ಕೋ ವಾಕರಿಕೆ ಬಂದಂತೆ ಅನಿಸಿದರೂ ಮಕ್ಕಳ ಮುಂದೆ ತೋರಗೊಡಲಾರದೇ ನಿಧಾನಕ್ಕೆ ಬಾಯಿಗಿಟ್ಟರು. ಆ ಕ್ಷಣಕ್ಕೆ, ಮೊದಲ ಬಾರಿಗೆ, 'ತಪ್ಪಾಗಿತ್ತೇನೋ ನಂದು... ಸತ್ಯ...' ಅನಿಸಿ ಕಣ್ಣು ಮಂಜಾಯಿತು.

★★★

ಸತ್ಯಭಾಮಾ ಮುತ್ತಿನ ಬಾಸಿಂಗ ಕಟ್ಟಿಸಿಕೊಂಡು, ಸೇರು ಒದ್ದು ಮಂಜಾಡಿಯ ಈ ಮನೆಗೆ ಬಂದಾಗ ಹತ್ತೊಂಬತ್ತು ವರುಷವಷ್ಟೇ. ಸಾಗರದ ಬಾಪಟ್ ಪರಿವಾರದ ಕೆಳ ಮಧ್ಯಮ ವರ್ಗದ ಕುಟುಂಬದಲ್ಲಿ ಹುಟ್ಟಿ ಬೆಳೆದ ಸತ್ಯಳಿಗೆ, ಗಂಡನಾಗುವ ದತ್ತಾತ್ರೇಯ ಜೋಶಿ, 'ಮೇಷ್ಟ್ರು' ಅಂದಾಗ ಖುಷಿಯಾಗಿತ್ತು. ಮೊದಲ ವರ್ಷದ ಪದವಿ ಓದುತ್ತಿದ್ದವಳಿಗೆ ಓದಿದ, ಕೆಲಸದಲ್ಲಿದ್ದ ಗಂಡು ಗೊತ್ತಾಯಿತು ಎಂದಾಗ ಮಾತಾಡುವ ಅವಕಾಶವಿಲ್ಲದೇ, 'ಇರುವ ಕ್ರಮವೇ ಹೀಗೇ' ಎನ್ನುವಂತೆ ದತ್ತುನ ಪತ್ನಿಯಾಗಲು ತಯಾರಾಗಿದ್ದಳು. ಕನ್ನಡ ಮತ್ತು ಮರಾಠಿ ಎರಡರಲ್ಲೂ ಪದ್ಯ ಬರೆದು